

ವೈಕಲ್ಯ ಮರೆತು ಕಬಡ್ಡಿಗೆ ಸಜ್ಜಾಗಿರುವ ಆಟಗಾರರು

ಮರಳಿ ಪಡೆದುಕೊಂಡ ಅವರು ಕಬಡ್ಡಿ, ಪ್ಯಾರಾ ಅಥ್ಲೆಟಿಕ್ಸ್‌ನ ಜಾವೆಲಿನ್ ಮತ್ತು ಡಿಸ್ಕಸ್‌ನಲ್ಲಿ ಭಾಗವಹಿಸುತ್ತ ಹೆಸರು ಗಳಿಸಿದರು. ಈಗ ಅವರು ಕರ್ನಾಟಕ ಪ್ಯಾರಾ ಕಬಡ್ಡಿ ತಂಡದ ಸದಸ್ಯ. ಆಲ್‌ರೌಂಡ್ ಆಟಗಾರ ಆಗಿರುವ ವಿನಾಯಕ ಅವರು ಪ್ಯಾರಾ ಕಬಡ್ಡಿಯಿಂದಾಗಿ ಮರುಜನ್ಮ ಪಡೆದುಕೊಂಡ ಸಂಭ್ರಮದಲ್ಲಿದ್ದಾರೆ.

ಚಿಕ್ಕಮಗಳೂರು ಜಿಲ್ಲೆ ಬೀರೂರಿನ ಉಲ್ಲೇಹಳ್ಳಿಯ ನಾಗೇಶ್ ಎಚ್.ಎನ್. ಮಂಗಳೂರಿನ ಕರಾವಳಿ ಕಾಲೇಜಿನಲ್ಲಿ ಎಂ.ಬಿ.ಎ. ಮಾಡುತ್ತಿದ್ದಾರೆ. ಜನಿಸುವಾಗಲೇ ಕತ್ತು ಸ್ವಲ್ಪ ತಿರುಗಿದ್ದ ಅವರಿಗೆ ಕಬಡ್ಡಿಯಲ್ಲಿ ವಿಶೇಷ ಆಸಕ್ತಿ. ಕುವೆಂಪು ವಿಶ್ವವಿದ್ಯಾಲಯದ ಅಂತರ ಕಾಲೇಜು ಟೂರ್ನಿಗಳಲ್ಲಿ ಆಲ್‌ರೌಂಡ್ ಆಟದ ಮೂಲಕ ಎದುರಾಳಿಗಳನ್ನು ನಡುಗಿಸಿದವರು. ಆದರೂ ವೈಕಲ್ಯದ ಮಾನಸಿಕ ತುಮುಲ ಕಾಡುತ್ತಲೇ ಇತ್ತು. ಪ್ಯಾರಾ ಕಬಡ್ಡಿಯಲ್ಲಿ ಅವಕಾಶ ಲಭಿಸಿದ ನಂತರ ಬಿಕ್ಕಟ್ಟು ನೀಗಿತು. ಮೊಹಾಲಿಯಲ್ಲಿ ಮಾರ್ಚ್ ಕೊನೆಯ ವಾರ ನಡೆದ ಮೊತ್ತಮೊದಲ ರಾಷ್ಟ್ರೀಯ ಪ್ಯಾರಾ ಕಬಡ್ಡಿ ಚಾಂಪಿಯನ್‌ಷಿಪ್‌ನಲ್ಲಿ ಕರ್ನಾಟಕ ತಂಡವನ್ನು ಮುನ್ನಡೆಸಿದವರು ನಾಗೇಶ್.

ಭಾರತ ಪ್ಯಾರಾಲಿಂಪಿಕ್ ಸಮಿತಿಯ ಮಾನ್ಯತೆ ಲಭಿಸಿದ ನಂತರ ಆರಂಭವಾದ ಪ್ಯಾರಾ ಕಬಡ್ಡಿ ಚಟುವಟಿಕೆಗಳು ಅಂಗವಿಕಲ ಕಬಡ್ಡಿಪಟುಗಳಲ್ಲಿ ಭರವಸೆ ಮೂಡಿಸಿವೆ. ಜನಿಸುವಾಗಲೇ ವೈಕಲ್ಯ ಇದ್ದವರು, ಅಪಘಾತಕ್ಕೆ ಒಳಗಾಗಿ ಕೈ–ಕಾಲು ಕಳೆದುಕೊಂಡವರು 'ನಮಗೂ ವೇದಿಕೆಯೊಂದಿದೆ' ಎಂದು ಬೀಗುವ ವಾತಾವರಣ ಈಗ ನಿರ್ಮಾಣವಾಗಿದೆ. ಪ್ಯಾರಾ ಕಬಡ್ಡಿ ಟೂರ್ನಿಗಳು ದೇಶದ ಮೂಲೆಮೂಲೆಗಳಲ್ಲಿ ಆಗಾಗ ನಡೆಯುತ್ತಿವೆಯಾದರೂ ಫೆಡರೇಷನ್ ಮಾನ್ಯತೆ ಲಭಿಸಿದ್ದರಿಂದಾಗಿ ಈಗ ಅಧಿಕೃತ ಮುದ್ರೆ ಬಿದ್ದಂತಾಗಿದೆ.

ಯಾದಗಿರಿ ಮುದ್ನಾಳ್‌ನ ತಾಂಡಾವೊಂದರ ಕುಮಾರ್ ಪವಾರ್ ಎಂಟನೇ ತರಗತಿಯಲ್ಲಿದ್ದಾಗ ಸಂಬಂಧಿಕರ ಮದುವೆಗೆ ಹೋದವರು ತಗ್ಗಿನಲ್ಲಿ ನೀರು ನೋಡಿ ಗೆಳೆಯರ ಜೊತೆ ಆಟವಾಡಲು ಇಳಿದಿದ್ದರು. ಬಿದ್ದು ಕೈ ಮುರಿದುಕೊಂಡರು. ಅದಕ್ಕೆ ಚಿಕಿತ್ಸೆ ಸಮರ್ಪಕವಾಗಿ ಸಿಗದ ಕಾರಣ ಕೈ ಮುರುಟಿ ಹೋಯಿತು, ಬದುಕಿನ ಭರವಸೆಯೂ.

ಯಾದಗಿರಿ ಪಟ್ಟಣದ ತರಕಾರಿ ಅಂಗಡಿಯಲ್ಲಿ ಕೆಲಸ ಮಾಡುತ್ತಿರುವ ಕುಮಾರ್ ಪವಾರ್ ಕಬಡ್ಡಿಯತ್ತ ಹೊರಳಿದ ನಂತರ ಬದುಕು ತಿರುವು ಪಡೆದುಕೊಂಡಿತು. ಸೆಂಟರ್‌ನಲ್ಲಿ ನಿಂತು ಒಂದೇ ಕೈಯಲ್ಲಿ ಎದುರಾಳಿ ತಂಡದ ರೇಡರನ್ನು ಟ್ಯಾಕಲ್ ಮಾಡುವ ಅವರು ಕೂಡ ಈಗ ಕರ್ನಾಟಕ ತಂಡದ ಆಟಗಾರ. 'ಜೀವನ ಇಷ್ಟೇ...' ಎಂದುಕೊಂಡಿದ್ದ ಅವರಿಗೆ ಪ್ಯಾರಾ ಕಬಡ್ಡಿ ಸಂಸ್ಥೆ ಈಗ ಊರುಗೋಲಾಗಿದೆ.

ಸಂಬಂಧಿಕರ ಬೈಕ್‌ನಲ್ಲಿ ಹೊಲದತ್ತ ಹೋಗುತ್ತಿದ್ದ ಯಾದಗಿರಿ ವೆಂಕಟೇಶ ನಗರ ನಿವಾಸಿ ಕುಮಾರ್ ರಾಥೋಡ್ ಬಿದ್ದು ಎಡಗೈ ಮುರಿದಿತ್ತು. ತಕ್ಷಣ ವೈದ್ಯರ ಬಳಿಗೆ ಕರೆದುಕೊಂಡು ಹೋಗಲು ಯಾರೂ ಇರಲಿಲ್ಲ. ಚಿಕಿತ್ಸೆ ಸರಿಯಾಗಿ ಸಿಗದ ಕಾರಣ ಕೈಯಲ್ಲಿ ವೈಕಲ್ಯ ಹಾಗೇ ಉಳಿಯಿತು. 'ಕ್ರೀಡೆ ಎಂದರೆ ನನಗೆ ಜೀವ. ಅದಕ್ಕಾಗಿ ಪ್ರಾಣ ಕೊಡುವುದಕ್ಕೂ ಸಿದ್ಧ' ಎನ್ನುವ ಅವರು ಕಬಡ್ಡಿ,

### ರಾಷ್ಟ್ರೀಯ ಚಾಂಪಿಯನ್‌ಷಿಪ್‌ನಲ್ಲಿ ಭಾಗವಹಿಸಿದ ಕರ್ನಾಟಕ ತಂಡ

ನಾಗೇಶ್ ಎಚ್.ಎನ್. (ನಾಯಕ, ಚಿಕ್ಕಮಗಳೂರು), ರಮೇಶ್ (ಉಪನಾಯಕ, ಕಲಬುರಗಿ), ವಿನಾಯಕ ಸಿದ್ದಪ್ಪ ಪೂಜೇರಿ, ಭೀಮಪ್ಪ ಶಿವಪ್ಪ, ಘನಶ್ಯಾಮ್ ರಾಥೋಡ್ (ವಿಜಯಪುರ), ಪ್ರವೀಣ್ ಕೆ. (ಹಾಸನ), ರಾಹುಲ್ ಸತೀಶ್ ಕಲೆ, ಚೈತನ್ಯ ಪಿ. (ಬೆಳಗಾವಿ), ಸಚಿನ್ ಕುಮಾರ್ (ಯಾದಗಿರಿ), ಅಕ್ಷಯ್ ಕುಮಾರ್, ಸುನಿಲ್ ರಾಥೋಡ್ (ಬೆಂಗಳೂರು), ಬಾಲರಾಜ್ ಎಸ್, ಕಾರ್ತಿಕ್ ರಾಮನಗರ) ಎಂ. ಆರ್ಮುಗಂ (ಕೋಚ್), ಗೋಪಿನಾಥ್ (ವ್ಯವಸ್ಥಾಪಕ).



ಕುಮಾರ್ ರಾಥೋಡ್

ಕುಮಾರ್ ಪವಾರ್